

ಅರುಣ ಪಿ. ಭಟ್ಟ



## ವಾರಭವಿಷ್ಯ: 10.11.2022ರಿಂದ 16.11.2022ರವರೆಗೆ




ಭೂ ವ್ಯವಹಾರಗಳಲ್ಲಿ ಒಳ್ಳೆ ಲಾಭ ಗಳಿಸುವ ಅವಕಾಶ ಇದೆ. ದೂರದ ಪ್ರದೇಶಗಳಿಗೆ ಪ್ರಯಾಣ ಮಾಡುವ ಸಾಧ್ಯತೆಯಿದೆ. ಯಾವುದೇ ಮುಖ್ಯ ಕಾಗದ ಪತ್ರಗಳಿಗೆ ಸಹಿ ಹಾಕುವ ಮುನ್ನ ಒಂದಕ್ಕೆ ನಾಲ್ಕು ಬಾರಿ ಪರಿಶೀಲಿಸಿ. ಕೆಲವರಿಗೆ ಉದ್ಯೋಗದಲ್ಲಿ ಬಡ್ತಿ ದೊರೆಯುವ ಸಾಧ್ಯತೆ ಹೆಚ್ಚಿದೆ.ಆರೋಗ್ಯ ವಿಚಾರದಲ್ಲಿ ಹೆಚ್ಚಿನ ಆತಂಕ ಪಡುವ ಅಗತ್ಯ ಇಲ್ಲ. ಶುಭದಿನ 10. ಹನುಮಾನ್ ಚಾಲೀಸ್ ಓದಿರಿ.




ನೀವು ನಂಬಿದ ವಿಚಾರಗಳನ್ನು ಪ್ರಸ್ತುತ ಪಡಿಸುವುದಕ್ಕೆ ಬಹಳ ಶ್ರಮ ಪಡುತ್ತೀರಿ. ಸ್ನೇಹಿತರು ಸಾಲ ಕೇಳಿದರು ಎಂದು ನೀಡಿದರೆ ವಾಪಸ್ ಬರುವುದು ಕಷ್ಟ. ಕಾನೂನು ವಿಚಾರಗಳು ನಿಮ್ಮ ವಿರುದ್ಧ ಸಾಗುತ್ತವೆ. ಬೇರೊಬ್ಬರು ನೀಡಿದ ವಸ್ತು, ಹಣ, ಕಾಗದ ದಾಖಲೆ ಪತ್ರಗಳನ್ನು ನೀವು ಕಳೆದುಕೊಳ್ಳುವ ಅಪಾಯವಿದೆ. ವಾಹನ ಚಾಲನೆ ಮಾಡುವಾಗ ಎಚ್ಚರ. ಶುಭದಿನ 12. ಗಣೇಶಪಂಚರತ್ನ ಸ್ತೋತ್ರ ಪಠಣ ಮಾಡಿರಿ.




ಒಂದೇ ಸಲಕ್ಕೆ ಹಲವು ಅವಕಾಶಗಳು ನಿಮ್ಮನ್ನು ಹುಡುಕಿಕೊಂಡು ಬರುತ್ತವೆ. ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಬಗ್ಗೆ ಸ್ಪಷ್ಟತೆ ಇರಲಿ. ಸರ್ಕಾರಿ ನೌಕರರಿಗೆ ವರ್ಗಾವಣೆ ಆದರೂ ಆಗಬಹುದು. ವೈಯಕ್ತಿಕ ಸಂಬಂಧದಲ್ಲಿ ಬಹಳ ಹುಷಾರಾಗಿರಬೇಕು. ಸಂಗಾತಿ ಮಕ್ಕಳಿಗೆ ಬೆಲೆ ಬಾಳುವ ಉಡುಗೊರೆ ನೀಡುವ ಬಗ್ಗೆ ಆಲೋಚನೆ ಮಾಡುತ್ತೀರಿ. ಶುಭದಿನ 14. ಕಾಲಭೈರವಾಷ್ಟಕ ಸ್ತೋತ್ರ ಪಠಿಸಿರಿ.




ನಿಮ್ಮ ಆದಾಯದಲ್ಲಿ ಈ ವಾರ ಹೆಚ್ಚಳ ಕಾಣಿಸಿಕೊಳ್ಳಲಿದೆ. ಈ ಹಿಂದೆ ನೀವು ಹಾಕಿದ ಶ್ರಮಕ್ಕೆ ಒಂದೊಂದಾಗಿ ಪ್ರತಿಫಲ ದೊರೆಯಲು ಆರಂಭವಾಗುತ್ತದೆ. ಸಾಮಾಜಿಕವಾಗಿ ನಿಮ್ಮ ವರ್ಚಸ್ಸು, ಕೀರ್ತಿ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳಿಗೆ ಈ ವಾರ ಯಶಸ್ಸು ದೊರೆಯುವ ಅವಕಾಶಗಳು ಹೆಚ್ಚಿದೆ. ಕ್ರೀಡಾ ಕ್ಷೇತ್ರದಲ್ಲಿ ಯಶಸ್ಸು ಪಡೆಯುವ ಅವಕಾಶ ಹೆಚ್ಚಾಗಿರುತ್ತದೆ. ಶುಭದಿನ 16. ವಿಷ್ಣುಸಹಸ್ರನಾಮ ಓದಿರಿ.




ಇತರರಿಗೆ ಸಹಾಯ ಮಾಡಲು ಮುಂದಾಗುತ್ತೀರಿ. ಬಹಳ ಕಾಲದಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದರೆ ಅದರ ಶ್ರಮದ ಫಲವನ್ನು ಪಡೆಯಲು ಇದು ಸರಿಯಾದ ಕಾಲ. ಪೋಷಕರಿಗೆ ಮಕ್ಕಳ ವರ್ತನೆ, ಬೆಳವಣಿಗೆ ಹಾಗೂ ನಡವಳಿಕೆಯಿಂದ ಸಂತೋಷ ಉಂಟಾಗುತ್ತದೆ. ಆರೋಗ್ಯದಲ್ಲಿ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಶುಭದಿನ 15. ಶ್ರೀಗೋವಿಂದಾಷ್ಟಕಮ್ ಪಠಿಸಿರಿ.




ತಾಯಿಯ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ. ನಿಮಗೂ ಕೆಮ್ಮು, ನೆಗಡಿಯಂಥ ಅನಾರೋಗ್ಯ ಸಮಸ್ಯೆಗಳು ಕಾಡಬಹುದು. ವಾರದ ಕೊನೆಗೆ ಆರ್ಥಿಕವಾಗಿ ಬಲ ಬರುತ್ತದೆ. ಉಳಿತಾಯ ಮಾಡುವ ಕಡೆಗೆ ಮನಸ್ಸು ಹರಿಯುತ್ತದೆ. ಮಕ್ಕಳ ಪ್ರಗತಿಯಿಂದ ಹೆಮ್ಮೆ, ಸಂತೋಷ ಉಂಟಾಗುತ್ತದೆ. ಬಾಕಿ ಹಣ ಬರಬೇಕಾಗಿದ್ದಲ್ಲಿ ಬರುವ ಅವಕಾಶ ಹೆಚ್ಚಿರುತ್ತದೆ. ಶುಭದಿನ 15. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಉದ್ಯೋಗ ನಿಮಿತ್ತ ದೂರ ಪ್ರಯಾಣ ಮಾಡಬೇಕಾದ ಸನ್ನಿವೇಶ ಎದುರಾಗಲಿದೆ. ಹಣ ಹೂಡಿಕೆಯಲ್ಲಿ ಉತ್ತಮ ಲಾಭ ಆಗಲಿದೆ. ಉದ್ಯೋಗ ಸ್ಥಳದಲ್ಲಿ ಸ್ವಲ್ಪ ಮಟ್ಟಿಗೆ ಒತ್ತಡ ಕಾಣಿಸಿಕೊಳ್ಳಬಹುದು. ಆರೋಗ್ಯದಲ್ಲೂ ಏರು ಪೇರಾಗುತ್ತದೆ. ಸೋದರ– ಸೋದರಿಯರ ಜತೆಗೆ ಉತ್ತಮ ಬಾಂಧವ್ಯ ಇರುತ್ತದೆ. ಸಂತಾನ ನಿರೀಕ್ಷೆಯ ದಂಪತಿಗೆ ಶುಭ ಸುದ್ದಿ. ಶುಭದಿನ 16. ದೇವಿ ಆರಾಧನೆ, ಸೌಂದರ್ಯಲಹರಿ ಪಠಿಸಿರಿ.




ಹೊಸದಾಗಿ ಮನೆ ಕಟ್ಟಬೇಕು ಎಂದು ಆಲೋಚನೆ ಮಾಡುತ್ತಿರುವವರಿಗೆ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಸೂಕ್ತ ಸಮಯ. ನೌಕರಸ್ಥರಿಗೆ ಮೇಲಧಿಕಾರಿಗಳ ಜತೆಗೆ ಉತ್ತಮ ಸಂಬಂಧ ಇರುತ್ತದೆ. ಪ್ರೀತಿ– ಪ್ರೇಮದಲ್ಲಿ ಇರುವವರು ಸಂಗಾತಿ ಜತೆಗೆ ಪ್ರಮುಖವಾದ ವಿಚಾರಗಳನ್ನು ಚರ್ಚೆ ನಡೆಸಲಿದ್ದೀರಿ. ಶುಭದಿನ 14. ಶಿವಪೂಜೆ, ಶಿವಪಂಚಾಕ್ಷರಸ್ತೋತ್ರ ಪಠಿಸಿರಿ.




ಉದ್ಯೋಗಸ್ಥರಿಗೆ ಮೇಲಧಿಕಾರಿಗಳಿಂದ ಪ್ರಶಂಸೆ. ವ್ಯಾಪಾರಸ್ಥರಿಗೆ ಸಮಸ್ಯೆಗಳು ಎದುರಾಗುವ ಸಂಭವ. ಆರೋಗ್ಯದಲ್ಲಿ ತೊಂದರೆ ಕಾಣಿಸಿಕೊಳ್ಳುತ್ತದೆ. ವೈವಾಹಿಕ ಜೀವನ ಚೆನ್ನಾಗಿರುತ್ತದೆ. ಸಂಗಾತಿ ಜತೆಗೆ ಸುಮಧುರವಾದ ಕ್ಷಣಗಳನ್ನು ಅನುಭವಿಸಲಿದ್ದೀರಿ. ಭೂಮಿ ಖರೀದಿಗೆ ಒಳ್ಳೆಯ ಸಮಯ. ಮನೆಯಲ್ಲಿ ಶುಭ ಕಾರ್ಯ ನಡೆಯುವ ಸಾಧ್ಯತೆ ಇದೆ. ಶುಭದಿನ 15. ದೇವ್ಯಪರಾಧಕ್ಷಮಾಪಣ ಸ್ತೋತ್ರ ಪಠಿಸಿರಿ.




ಸಾಮಾಜಿಕವಾಗಿ ಹೆಸರು ಮಾಡಲು ಅದ್ಭುತವಾದ ಅವಕಾಶಗಳು ದೊರೆಯುತ್ತವೆ. ನಿಮ್ಮ ಜನಪ್ರಿಯತೆ ಕೂಡ ಹೆಚ್ಚಾಗಲಿದೆ. ವಿದ್ಯಾರ್ಥಿಗಳು ಹೆಚ್ಚು ಶ್ರಮ ವಹಿಸಿ ಗುರಿಯನ್ನು ತಲುಪಲಿದ್ದೀರಿ. ಕೋರ್ಟ್ ವ್ಯಾಜ್ಯಗಳು ನಡೆಯುತ್ತಿದ್ದಲ್ಲಿ ಅದಕ್ಕಾಗಿ ಹೆಚ್ಚಿನ ಹಣ ಖರ್ಚು ಮಾಡಬೇಕಾಗುತ್ತದೆ. ಆರೋಗ್ಯವು ಉತ್ತಮವಾಗಿರುತ್ತದೆ. ಶುಭದಿನ 14. ಸಂಕಷ್ಟಹರ ಮಹಾಗಣಪತಿ ಪೂಜೆ ಮಾಡಿರಿ.




ಕೌಟುಂಬಿಕ ವಿಚಾರಗಳಲ್ಲಿ ಉತ್ತಮವಾದ ಪ್ರಗತಿಯನ್ನು ಕಾಣಲಿದ್ದೀರಿ. ಆರೋಗ್ಯ ಉತ್ತಮವಾಗಿ ಇರುತ್ತದೆ. ಬಂಡವಾಳ ಹೂಡಿಕೆಗೆ ಹಲವು ಅವಕಾಶಗಳನ್ನು ಪರಿಶೀಲಿಸಿ, ಯಶಸ್ಸು ಪಡೆಯುತ್ತೀರಿ. ಇಂಥದ್ದೇ ವಿಚಾರಗಳಿಗೆ ಸಂಬಂಧಿಕರು ನಿಮ್ಮ ಸಹಾಯ ಕೇಳಿಕೊಂಡು ಬರಲಿದ್ದಾರೆ. ಅವರಿಗೆ ನಿಮ್ಮಿಂದ ಆದ ಸಹಾಯವನ್ನು ಮಾಡುವಿರಿ. ಶುಭದಿನ 12. ಶ್ರೀ ಲಕ್ಷ್ಮೀ ನರಸಿಂಹಪಂಚರತ್ನ ಸ್ತೋತ್ರ ಪಠಿಸಿರಿ.




ವಾರ ಪೂರ್ತಿ ಕೆಲಸದಲ್ಲೇ ನಿರತರಾಗುವಿರಿ. ಈ ಮಧ್ಯೆ ಶ್ವಾಸಕೋಶ ಸಮಸ್ಯೆ ಹಾಗೂ ರಕ್ತದಲ್ಲಿನ ದೋಷದಿಂದ ಅನಾರೋಗ್ಯ ಉಂಟಾಗುವ ಸಂಭವವಿದೆ. ಮನೆಯಲ್ಲಿ ಶುಭ ಕಾರ್ಯವೊಂದನ್ನು ಆಯೋಜಿಸುವಿರಿ. ಉದ್ಯೋಗಿಗಳು ತಮ್ಮ ಶ್ರಮಕ್ಕೆ ಮೇಲಧಿಕಾರಿಗಳಿಂದ ಮೆಚ್ಚುಗೆ ಪಡೆಯುತ್ತಾರೆ. ವ್ಯಾಪಾರ ವ್ಯವಹಾರ ಮಾಡುತ್ತಿರುವವರಿಗೆ ಆದಾಯದಲ್ಲಿ ಹೆಚ್ಚಳ ಆಗಲಿದೆ. ಶುಭದಿನ 16. ಲಿಂಗಾಷ್ಟಕ ಪಠಿಸಿರಿ.